ಕಡಲ ತೀರದ ಊರುಗಳಲ್ಲಿ ಬೇಸಿಗೆ ಬಂತೆಂದರೆ ಬಹಳ ರಗಳೆ! ಬಿಸಿಲಿನ ಜೊತೆಗೆ ಗಾಳಿಯಲ್ಲಿನ ಉಪ್ಪು ಸೇರಿ ಮೈಯೆಲ್ಲಾ ಧಾರಾಕಾರ ಬೆವರು. ಛೇ, ಎಂಥ ಸಾವು! ಅಂಥಾ ಸೆಕೆಗಾಲದಲ್ಲಿ ರೊಯ್ಯನೆ ಬೀಸುತ್ತಿದ್ದ ಗಾಳಿಯ ನಡುವೆ, ಕರಾವಳಿಯ ಆ ಊರಿನಲ್ಲಿ ಬರಿಯ ಅಡ್ಡ ಪಂಚೆ ಉಟ್ಟಿದ್ದ ಹಿರಿಯರೊಬ್ಬರು ಬೀದಿಯಲ್ಲಿ ಓಡಾಡುತ್ತಿದ್ದರು. ಮೈಮೇಲೆ ಯಾವುದೇ ವಸ್ತ್ರವಿಲ್ಲದೆ, ಬರಿದಾಗಿದ್ದ ಎದೆಯ ಮೇಲೆ ಹಾಗೂ ಬೆನ್ನ ಮೇಲೆ ಎರಡು ರಟ್ಟಿನ ತುಂಡುಗಳನ್ನು ನೇತು ಹಾಕಿಕೊಂಡಿದ್ದರು. ಅದರ ಮೇಲೆ ಬರೆದಿದ್ದ ಅಕ್ಷರಗಳು ಬೆವರಿನಿಂದಾಗಿ ಮಸುಕಾಗಿದ್ದವು. ರಟ್ಟಿನ ಮೇಲೆ ಈ ರೀತಿ ಬರೆದಿದ್ದರು: “ಹರಿಜನರಿಗೂ ದೇವಸ್ಥಾನ ಪ್ರವೇಶವಾಗಬೇಕು.” “ಮಾನವ ಸೇವೆಯೇ ಮಾಧವ ಸೇವೆ.” ಇತ್ತೀಚೆಗೆ ಊರಿನ ಪ್ರತಿಯೊಬ್ಬರೂ ರಟ್ಟಿನ ಮೇಲೆ ಬರೆದ ಸಂದೇಶವನ್ನು ಊರೂರು ಸುತ್ತಿ ಜನರಿಗೆ ತಲುಪಿಸುವ ಕೆಲಸ ಮಾಡುತ್ತಿದ್ದರು. ಆ ಹಿರಿಯರು ಅಲ್ಲಲ್ಲಿ ನಿಲ್ಲುವುದು, ನಿಂತಕಡೆ ರಟ್ಟಿನ ಮೇಲಿದ್ದ ಸಂದೇಶವನ್ನು ಜೋರಾಗಿ ಕೂಗಿ ಹೇಳುವುದು, ನಂತರ ಹೊಸ ರಟ್ಟಿನಲ್ಲಿ ಸಂದೇಶಗಳನ್ನು ಬರೆದು ಕತ್ತಿಗೆ ನೇತಾಕಿಕೊಳ್ಳುವುದು ಅಥವಾ ಮಸುಕಾದ ಅಕ್ಷರಗಳನ್ನು ಮತ್ತೆ ಬರೆದುಕೊಳ್ಳುವುದು ಇದೇ ಕೆಲಸ ಮಾಡುತ್ತಿದ್ದರು.

ಆವತ್ತು ಅವರು ನೇರವಾಗಿ ಗುರುನಾಥ ಶೆಟ್ಟಿಯವರ ಬಟ್ಟೆಯಂಗಡಿಯ ಮುಂದೆ ಬಂದು ನಿಂತರು. “ಶೆಟ್ರೇ ನಾನು ರಟ್ಟಿನ ಸಲುವಾಗಿ ಬಂದಿದ್ದೇನೆ...” ಅಂದರು. ಶೆಟ್ರು ಅವರನ್ನು ನೋಡಿ ಮುಖ ಸಿಂಡರಿಸಿಕೊಂಡು ಆದರೂ ತೋರಿಕೆಗೆ ನಗುತ್ತಾ, “ಓ.. ದೊಡ್ಡವರು ಬನ್ನಿ... ಬನ್ನಿ...” ಅಂತ ಹೇಳುತ್ತಾ ಹೊರಗಡೆಯ ಬೆಂಚು ತೋರಿಸಿ ಕೂರಲು ಹೇಳಿದರು. ಬಿಸಿಲಿನ ಹೊಡೆತಕ್ಕೆ ದಣಿದಿದ್ದ ಆ ಹಿರಿಯ ಮನುಷ್ಯ ಉಸ್ಸೆಂದು ಬೆಂಚಿನ ಮೇಲೆ ಕೂತರು. “ಬಹಳ ಬಾಯಾರಿಕೆಯಾಗ್ತಿದೆ. ಸ್ವಲ್ಪ ನೀರು ಕೊಡಿ” ಅಂದರು. ಹಿರಿಯರು, ಅದರಲ್ಲೂ ಯಜಮಾನರ ಕುಲಬಾಂಧವರು ನೀರು ಕೇಳಿದರೆ ಇಲ್ಲವೆನ್ನಲಾದೀತೇ? ಎಂದುಕೊಂಡು ಅಂಗಡಿಯ ಗುಮಾಸ್ತ ಸರಸರನೆ ಒಳಬಂದು ಗಡಿಗೆಯಿಂದ ಒಂದು ಲೋಟ ನೀರು ಕೊಡಲು ಮುಂದಾದ.

ಅಷ್ಟರಲ್ಲಿ ಶೆಟ್ಟರು ಅವನನ್ನ ತಡೆದು, “ಏಯ್ ಕತ್ತೆ, ಬಂದಿದ್ದು ಯಾರೆಂದು ಗೊತ್ತುಂಟೇನೋ? ಮಹಾನುಭಾವರು, ಶ್ರೀ ಶ್ರೀ ಶ್ರೀ ಪೊಟ್ಟಿ ಶ್ರೀರಾಮುಲುರವರು. ಅಂಥ ಹಿರಿಯರಿಗೆ ಬರೀ ನೀರು ಕೊಡುವುದೇ. ಆ ಲೋಟ ಅಲ್ಲಿಟ್ಟು, ಓಡಿ ಹೋಗಿ ಪೆಂಡೆಂ ಚಂದ್ರಣ್ಣರವರ ಅಂಗಡಿಯಿಂದ ಸೋಡಾ ತೆಗೆದುಕೊಂಡು ಬಾ” ಎಂದರು. ಗುಮಾಸ್ತನಿಗೆ ಗಲಿಬಿಲಿಯಾಯಿತು. ಅವನು ಗಾಬರಿಯಿಂದ ಸೋಡಾ ತರಲು ಹೊರಟುನಿಂತ.

“ಹಾ... ಬಂದೇ ಬಿಟ್ರಲ್ಲಾ ಹೋರಾಟಗಾರರು. ಎಂಥಾ ಭಯಂಕರ ಯೋಧರು ನೋಡಿ ಮಾರ್ರೆ...” ಎಂದು ಊರವರೆಲ್ಲಾ ಮೂದಲಿಸುತ್ತಿದ್ದ ಹಂಗಿಸುತ್ತಿದ್ದ ಆ ಪೊಟ್ಟಿ ಶ್ರೀ ರಾಮುಲು ಅವರಿಗೆ ಈ ಪ್ರಹಸನ ನೋಡಿ ನಗುಬಂತು.

ಅವರು ಎದ್ದು ನಿಂತು, “ನಿಮಗ್ಯಾಕೆ ತೊಂದರೆ ಶೆಟ್ರೆ. ನಮ್ಮ ಊರಿನವರು ನನಗೆ